# ಕನ್ನಡ ಸಾಹಿತ್ಯ ಪರಿಷತ್ತು

ಬೆಂಗಳೂರು – ೧೮

ಸ್ಥಾಪನೆ : ೧೯೧೫

## ಕನ್ನಡ ರತ್ನ ಪರೀಕ್ಷೆ – ೨೦೨೨

ಪ್ರಶ್ನೆಪತ್ರಿಕೆ – ೧

## ಹಳಗನ್ನಡ ಸಾಹಿತ್ಯ

[ಮರುಪರೀಕ್ಷೆ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ]

**ಅವಧಿ : ೩ ಗಂಟೆಗಳು** **ಗರಿಷ್ಠ ಅಂಕಗಳು : ೧೦೦**

**I. ಇವುಗಳಲ್ಲಿ ಹತ್ತು ಪದಗಳಿಗೆ ಅರ್ಥ ಬರೆಯಿರಿ** **೧ x ೧೦=೧೦**

ಕೆಟ್ಟೊಡೆ, ಕುರಿತೋದದೆಯುಂ, ಸರಸಿಜ, ಬಾಷ್ಪಾವಾರಿ, ಅಲಕಾವಳಿ ಅಣಂ, ಪಾವಕ, ಕಾಂತಾರ, ಇಳಿಗಾರ, ಕುವಲಯ, ಅರಲ್, ಉರ್ಚು, ಪವಡಿಸು, ಅವನಿ

**II. ಎರಡು ಪದ್ಯಗಳ ಭಾವಾರ್ಥ ಬರೆಯಿರಿ.** **೨ x ೧೦=೨೦**

೧. ನಿನ್ನೀ ಕೆಳೆಯ ಸುಯೋಧನ
ನನ್ನೊಡದೆ ನುಡಿಯದಪ್ಪಿಕೊಳ್ಳದೆ ಬೇಸನೇ
ನೆನ್ನದೆ ಜೀಯೆನ್ನದೆ ದೇ
ವೆನ್ನದದೇಕುಸಿರದಿರ್ಪೆಯಂಗಾಧಿಪತೀ

೨. ಕೊರಳ ಸೆರೆ ಹಿಗ್ಗಿದವು ದೃಗುಜಲ
ಉರವಣಿಸಿ ಕಡು ನೊಂದನಕಟಾ
ಕುರುಪತಿಗೆ ಕೇಡಾದುದೆಂದನು ಮನದೊಳಗೆ
ಹರಿಯ ಹಗೆ ಹೊಗೆದೋರದುರುಹದೆ
ಬರಿದೆ ಹೋಹುದೆ ತನ್ನ ವಂಶವ
ನರುಹಿ ಕೊಂದನು ಹಲವು ಮಾತೇನೆಂದು ಚಿಂತಿಸಿದ

**III. ಎರಡು ವಿಷಯಗಳಿಗೆ ಟಿಪ್ಪಣಿ ಬರೆಯಿರಿ** **೫ x ೨=೧೦**

೧. ಹಲ್ಮಿಡಿ ಶಾಸನ  ೨. ಅಮೃತಮತಿ  ೩. ಸಂಚಿ ಹೊನ್ನಮ್ಮ

(ಪು.ತಿ.ನೋ)

೮/೧

**IV. ಮೂರು ಪ್ರಶ್ನೆಗಳಿಗೆ ವಿವರವಾದ ಉತ್ತರ ಬರೆಯಿರಿ** **೩ x ೧೦=೩೦**

೧. ಕರ್ಣನ ಕಳೇಬರವನ್ನು ಕಂಡ ದುರ್ಯೋಧನನು ದುಃಖಿಸಿದ ಬಗೆ ಹೇಗೆ? ಚರ್ಚಿಸಿ.

೨. ಅಮೃತಮತಿಯ ಸಖಿಯು ಅಷ್ಟಾವಂಕನ ರೂಪವನ್ನು ಹೇಗೆ ವರ್ಣಿಸಿದ್ದಾಳೆ? ವಿವರಿಸಿ.

೩. ಹೆಣ್ಣು ಸಂಸಾರದ ಕಣ್ಣು ಎಂಬ ಮಾತಿನ ಹಿನ್ನೆಲೆಯಲ್ಲಿ ಸಂಸಾರದಲ್ಲಿ ಹೆಣ್ಣಿನ ಮಹತ್ವದ ವಿಚಾರವನ್ನು ಸಂಚಿಹೊನ್ನಮ್ಮ ಹೇಗೆ ಕಟ್ಟಿಕೊಟ್ಟಿದ್ದಾಳೆ? ವಿಶ್ಲೇಷಿಸಿ.

೪. ರಾಗಿ ಮತ್ತು ನೆಲ್ಲಿನ (ಭತ್ತ) ಜಗಳದಲ್ಲಿ ರಾಗಿಗೆ ಗೆಲುವಾದ ಬಗೆ ಹೇಗೆ? ವಿವರಿಸಿ.

**V. ಮೂರು ಪ್ರಶ್ನೆಗಳಿಗೆ ವಿಮರ್ಶಾತ್ಮಕ ಉತ್ತರ ಬರೆಯಿರಿ.** **೩ x ೧೦=೩೦**

೧. ಸೀತೆಯು ಕಾಡಿಗೆ ಹೋಗುವ ವಿಚಾರವನ್ನು ತಿಳಿದ ಲಕ್ಷ್ಮಣನು ಹೇಗೆ ವಿರೋಧಿಸುತ್ತಾನೆ. ನಾಗಚಂದ್ರನ ಪದ್ಯದ ಹಿನ್ನೆಲೆಯಲ್ಲಿ ಚರ್ಚಿಸಿ.

೨. ಹರಿಶ್ಚಂದ್ರನು ಗಾನರಾಣಿಯರನ್ನು ಭೇಟಿಯಾದ ಸಂದರ್ಭವನ್ನು ಕುರಿತು ವಿಶ್ಲೇಷಿಸಿ.

೩. ಮಹಾಶ್ವೇತೆಯು ಮುನಿಕುಮಾರನ ಮೇಲೆ ವ್ಯಾಮೋಹಗೊಂಡ ಬಗೆ ಹೇಗೆ? ವಿವರಿಸಿ.

೪. ಭರತನ ಅಹಂಕಾರವನ್ನು ಬಾಹುಬಲಿಯು ನಾಶಮಾಡಿದ ಎಂಬುದನ್ನು ಪಂಪನ ಮಾತುಗಳಲ್ಲಿ ವಿಶ್ಲೇಷಿಸಿ.

* * * *

ಸ್ಥಾಪನೆ : ೧೯೧೫

# ಕನ್ನಡ ಸಾಹಿತ್ಯ ಪರಿಷತ್ತು

**ಬೆಂಗಳೂರು – ೧೮**

## ಕನ್ನಡ ರತ್ನ ಪರೀಕ್ಷೆ – ೨೦೨೨

**ಪ್ರಶ್ನೆಪತ್ರಿಕೆ – ೨**

**ಹೊಸಗನ್ನಡ ಸಾಹಿತ್ಯ (ಕಾವ್ಯ ಮತ್ತು ಸಣ್ಣಕತೆ)**

[ಮರುಪರೀಕ್ಷೆ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ]

**ಅವಧಿ : ೩ ಗಂಟೆಗಳು** **ಗರಿಷ್ಠ ಅಂಕಗಳು : ೧೦೦**

### ಭಾಗ – ೧

**I. ಒಂದರ ಭಾವಾರ್ಥವನ್ನು ಬರೆಯಿರಿ.** **೧x೬=೬**

೧) ಹಕ್ಕಿಯ ಕಣ್ಣಿಗೆ ಧೂಳಿನ ಕಾಡಿಗೆ
ಇಕ್ಕುತ, ಹೊಲದೆತ್ತಿಗೆ ದನಕಾಡಿಗೆ
ಫಕ್ಕನೆ ಹಟ್ಟಿಗೆ ಅಟ್ಟಿಸಿ, ಕಾಡಿಗೆ
ಸಿಕ್ಕದ ಕಿಚ್ಚನು ಊದಲು ಹಾರುತ

೨) ನರಕಕ್ಕ್ ಇಳ್ಸಿ ನಾಲ್ಗೆ ಸೀಳ್ಸಿ
ಬಾಯ್ ಒಲಿಸಾಕಿದ್ರೂನೆ
ಮೂಗ್ನಲ್ ಕನ್ನಡ ಪದವಾಡ್ತೀನಿ
ನನ್ನ ಮನಸನ್ ನೀ ಕಾಣೆ !

**II. ನಾಲ್ಕನ್ನು ಸಂದರ್ಭ ಸಹಿತ ವಿವರಿಸಿ.** **೪x೪=೧೬**

೧) ಇವಳ ತಂದೆಯದಾರು? ಇವಳ ತಾಯಿಯದಾರು?

೨) 'ನಾಳೆ ಗಂಡನ ಮನೆಗೆ ನೀ ಹೋಗದಿರುವೆಯಾ'

೩) ಬೆಳ್ಳಿನೊರೆಯ ನಗುನಗುತ್ತ

೪) ಮಾತೆಯನು ಪೂಜೆ ಮಾಡೇವು

೫) ಹಸಿದ ಕೈಗಳಿಗೆ ದುಡಿಮೆಯೆಂದರೆ ಪ್ರೀತಿ

೬) ಅಂಬೆಗಾಲಿಟ್ಟು ಹೊಸಲು ದಾಟಿತು ಬಿಸಿಲು



ರ / ೨

**III. ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ.** **೪x೨=೮**

೧) ಕುವೆಂಪು

೨) ಬಿ.ಎಂ. ಶ್ರೀಕಂಠಯ್ಯ

೩) ದ.ರಾ. ಬೇಂದ್ರೆ

೪) ಜಿ.ಎಸ್. ಶಿವರುದ್ರಪ್ಪ

೫) ಪಿ. ಲಂಕೇಶ್

೬) ಬಿ.ಟಿ. ಲಲಿತಾ ನಾಯಕ್

**IV. ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿ.** **೪x೫=೨೦**

೧. 'ಕನ್ನಡ ಪದಗೊಳ್' ಕವಿತೆಯಲ್ಲಿ ಕವಿ ರಾಜರತ್ನಂ ಅವರ ಕನ್ನಡ ಪ್ರೇಮವನ್ನು ತಿಳಿಸಿ.

೨. ಅನಾಥೆಯೊಬ್ಬಳು ತನ್ನ ಬದುಕಿಗೆ ಹೆದರಿ ಸಾವಿಗೆ ಶರಣಾದ ಚಿತ್ರಣವನ್ನು ವಿವರಿಸಿ.

೩. ವನಸುಮ ಕವಿತೆಯನ್ನು ಕುರಿತು ಬರೆಯಿರಿ.

೪. ಸ್ವಾತಂತ್ರ್ಯವನ್ನು ಕಿತ್ತುಕೊಳ್ಳುವ ರಾಜಕೀಯ ವ್ಯವಸ್ಥೆಯು 'ಗಾಂಧೀಸ್ಮರಣೆ' ಕವಿತೆಯಲ್ಲಿ ಹೇಗೆ ಚಿತ್ರಿತವಾಗಿದೆ?

೫. 'ಅವ್ವ' ಕವಿತೆಯಲ್ಲಿ ಹಳ್ಳಿಗಾಡಿನ ದುಡಿಮೆ ಮಾಡುವ ಹೆಣ್ಣುಮಗಳ ವ್ಯಕ್ತಿತ್ವವನ್ನು ತಿಳಿಸಿ.

೬. ನಿಮ್ಮೊಡನಿದ್ದೂ ನಿಮ್ಮಂತಾಗದೆ ಕವಿತೆಯ ಆಶಯವೇನು?

**V. ಒಂದು ಪ್ರಶ್ನೆಗೆ ಉತ್ತರಿಸಿ.** **೧x೧೦=೧೦**

೧. ಅಭಿವೃದ್ಧಿ ಹೆಸರಿನಲ್ಲಿ ಬೇಟೆಯಾಡಲು ಹೊರಟಿರುವ ಮನುಷ್ಯರ ಮನಸ್ಥಿತಿಯನ್ನು ಚಿಗರಿಗಂಗಳ ಚೆಲುವಿ ಕವಿತೆಯ ಹಿನ್ನೆಲೆಯಲ್ಲಿ ವಿವರಿಸಿ.

೨. ಕಲ್ಕಿ ಕವಿತೆಯನ್ನು ವಿಶ್ಲೇಷಿಸಿ.

### ಭಾಗ – ೨

### ಸಣ್ಣಕಥೆಗಳು

**I. ಕೆಳಗಿನವುಗಳಲ್ಲಿ ಮೂರು ಪ್ರಶ್ನೆಗಳಿಗೆ ಉತ್ತರಿಸಿ.** **೩x೮=೨೪**

೧) ಕೊಡಗಿನ ಗೌರವಮ್ಮನವರ 'ಪುನರ್ವಿವಾಹ' ಕತೆಯ ಪ್ರಧಾನ ಆಶಯವೇನು? ಇಲ್ಲಿ ಪುರುಷ ಮನಸ್ಸುಗಳನ್ನು ತಿದ್ದುವ ಪ್ರಯತ್ನ ಹೇಗೆ ನಡೆದಿದೆ?

೨) ಅನುಪಮಾ ನಿರಂಜನ ಅವರ 'ಮಣ್ಣು ದಿಬ್ಬದ ಮೇಲೆ' ಕಥೆಯಲ್ಲಿ ಬಡವರ ಬದುಕು ಹೇಗೆ ಉಳ್ಳವರ ದಾಹಕ್ಕೆ ಬಲಿಯಾಗುತ್ತದೆ.

೩) ನಗರ ಪ್ರದೇಶದ ಹೊಸ ತಲೆಮಾರು ವ್ಯಾಪರೀಕರಣದಿಂದಾಗಿ ಮನುಷ್ಯ ಸಂಬಂಧವನ್ನು ಕಳಚಿಕೊಳ್ಳುತ್ತಿರುವ ಸಂಗತಿಯನ್ನು 'ಸೋಫಿ ಕಟ್ಟಿದ ಮನೆ' ಕಥೆಯ ಹಿನ್ನೆಲೆಯಲ್ಲಿ ತಿಳಿಸಿ?

೪) ನೊಂಬು ಕಥೆಯಲ್ಲಿ ಬರುವ ಅದ್ದುವಿನ ಪಾತ್ರವನ್ನು ಕುರಿತು ಬರೆಯಿರಿ.

೫) 'ಬಿಡುಗಡೆ' ಕಥೆಯಲ್ಲಿ ಹೆಣ್ಣೊಬ್ಬಳ ಜೀವನ ಕಥೆ ಹೇಗೆ ಬಿಡುಗಡೆಗೊಳ್ಳುತ್ತದೆ ಎಂಬುದನ್ನು ವಿವರಿಸಿ.

೬) ಕುಂ. ವೀರಭದ್ರಪ್ಪನವರ 'ಕುಬುಸ' ಕಥೆಯ ಸಾಂಕೇತಿಕತೆಯನ್ನು ವಿವರಿಸಿ.

**II. ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ.** **೪x೨=೮**

೧) ಪಂಜೆ ಮಂಗೇಶರಾವ್ ೪) ನಾ ಡಿಸೋಜ

೨) ಸಣ್ಣ ಕಥೆಗಳು ೫) ನೆಲ ನಡುಗಿದಾಗ ಕಥೆಯ ಸಿದ್ದಪ್ಪ

೩) ಅನುಪಮಾ ನಿರಂಜನ ೬) ಅವ್ವನ ಯಾತ್ರಾ ಕಥೆಯ ರಾಜಣ್ಣ

**III. ಎರಡಕ್ಕೆ ಸಂದರ್ಭ ಸಹಿತ ವಿವರಿಸಿ.** **೨x೪=೮**

೧) ರಾಜಿಯು ನನ್ನ ಹೆಂಡತಿಯಾಗಬೇಕಾಗಿದ್ದ ದಿನಕ್ಕೆ ಇನ್ನೂ ಒಂದು ತಿಂಗಳಿತ್ತು.

೨) ನನ್ನನ್ನು ತಿರುಪತಿಗೆ ಕರೆದುಕೊಂಡು ಹೋಗು.

೩) ಹಾಯ್ ಸರೂ, ನೀ ಬ್ಯಾಂಕಿನಿಂದ ಬಂದು ಭಾಳೋತ್ತಾತೇನು?

* * * *

# ಕನ್ನಡ ಸಾಹಿತ್ಯ ಪರಿಷತ್ತು

**ಬೆಂಗಳೂರು – ೧೮**

ಸ್ಥಾಪನೆ : ೧೯೧೫

## ಕನ್ನಡ ರತ್ನ ಪರೀಕ್ಷೆ – ೨೦೨೨

**ಪ್ರಶ್ನೆಪತ್ರಿಕೆ – ೩**

## ಕಾವ್ಯಮೀಮಾಂಸೆ ಮತ್ತು ಸಾಹಿತ್ಯ ವಿಮರ್ಶೆ

[ಮರುಪರೀಕ್ಷೆ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ]

**ಅವಧಿ : ೩ ಗಂಟೆಗಳು** **ಗರಿಷ್ಠ ಅಂಕಗಳು : ೧೦೦**

**I. ಕೆಳಗಿನವುಗಳಲ್ಲಿ ಎಂಟಕ್ಕೆ ಟಿಪ್ಪಣಿ ಬರೆಯಿರಿ** **೮ x ೫ =೪೦**

೧. ಭಾರತೀಯ ಕಾವ್ಯ ಮೀಮಾಂಸೆ
೨. ಪ್ರಕ್ರಿಯಾ ಮೀಮಾಂಸೆ
೩. ಕಾವ್ಯ ಪ್ರಯೋಜನ
೪. ಮಂಟೇಸ್ವಾಮಿ ಪರಂಪರೆ
೫. ವೇದ ನಿರಾಕರಣೆ
೬. ಮನಃಶಾಸ್ತ್ರೀಯ ವಿಮರ್ಶೆ
೭. ಕವಿರಾಜಮಾರ್ಗ
೮. ಸ್ತ್ರೀವಾದಿ ಚಿಂತನೆ
೯. ಗಂಡೆಂಬ ಸೂತಕವ ದಾಟಿ
೧೦. ಶ್ರಮಣ ಪರಂಪರೆ

**II ಇವುಗಳಲ್ಲಿ ಮೂರು ಪ್ರಶ್ನೆಗಳಿಗೆ ಎರಡು ಪುಟಗಳಿಗೆ ಮೀರದಂತೆ ಉತ್ತರಿಸಿ.**
**೩ x ೧೦=೩೦**

೧. ವಿಮರ್ಶೆಯ ಘಟ್ಟಗಳನ್ನು ವಿವರಿಸಿ.
೨. 'ಸಮಗಾರ ಭೀಮವ್ವ' ಕವನದ ಪ್ರಾಯೋಗಿಕ ವಿಮರ್ಶೆಯನ್ನು ಬರೆಯಿರಿ.
೩. ಸ್ತ್ರೀಪರವಾದ ಚಿಂತನೆಗಳು ನೇಮಿಚಂದ್ರರ ಲೇಖನದಲ್ಲಿ ಹೇಗೆ ವ್ಯಕ್ತವಾಗಿವೆ? ಚರ್ಚಿಸಿ.
೪. ಪಂಪನ ಕಾವ್ಯಗಳ ಬಗೆಗೆ ದೇವನೂರು ಮಹಾದೇವ ಅವರ ಅಭಿಪ್ರಾಯಗಳೇನು? ವಿವರಿಸಿ.
೫. ಆಡುಭಾಷೆ–ಬರಹಭಾಷೆಯ ಬಗ್ಗೆ ಕವಿರಾಜಮಾರ್ಗಕಾರನ ಚಿಂತನೇಗಳೇನು ಚರ್ಚಿಸಿ.

**III. ಇವುಗಳಲ್ಲಿ ಎರಡು ಪ್ರಶ್ನೆಗಳಿಗೆ ಮೂರು ಪುಟಗಳಿಗೆ ಮೀರದಂತೆ ಉತ್ತರಿಸಿ**
**೨ x ೧೫=೩೦**

೧. ಕನ್ನಡ ಕಾವ್ಯ ಮೀಮಾಂಸೆಯ ಪ್ರಮುಖ ಪರಿಕಲ್ಪನೆಗಳನ್ನು ಚರ್ಚಿಸಿ.
೨. 'ಅವಜ್ಞೆಗೀಡಾದ ಸ್ಥಳೀಯ ಮೀಮಾಂಸೆ'ಯನ್ನು ವಿವರಿಸಿ.
೩. ಪ್ರಮಾಣ ನಿರಾಕರಣೆ–ಕನ್ನಡ ಕಾವ್ಯ ಮಾರ್ಗ'–ಈ ಹೇಳಿಕೆಯನ್ನು ವಚನ ಸಾಹಿತ್ಯದ ಹಿನ್ನೆಲೆಯಲ್ಲಿ ವಿಮರ್ಶಿಸಿ.

* * * *

# ಕನ್ನಡ ಸಾಹಿತ್ಯ ಪರಿಷತ್ತು

**ಬೆಂಗಳೂರು – ೧೮**

ಸ್ಥಾಪನೆ : ೧೯೧೫

## ಕನ್ನಡ ರತ್ನ ಪರೀಕ್ಷೆ – ೨೦೨೨

**ಪ್ರಶ್ನೆಪತ್ರಿಕೆ – ೪**

## ಭಾಷಾ ವಿಜ್ಞಾನ

[ಮರುಪರೀಕ್ಷೆ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ]

**ಅವಧಿ : ೩ ಗಂಟೆಗಳು** **ಗರಿಷ್ಠ ಅಂಕಗಳು : ೧೦೦**

**I. ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. ೪x೫=೨೦**

೧. ತೌಲನಿಕ ಭಾಷಾವಿಜ್ಞಾನದ ಸ್ವರೂಪವನ್ನು ತಿಳಿಸಿ.

೨. ಶಿಷ್ಟಭಾಷೆ ಎಂದರೇನು? ಅದು ರೂಪುಗೊಳ್ಳುವ ಬಗೆಯನ್ನು ಸಂಕ್ಷಿಪ್ತವಾಗಿ ಪರಿಚಯಿಸಿ.

೩. ಭಾಷಾದ್ವಿರೂಪತ್ವವನ್ನು ವಿವರಿಸಿ.

೪. ಐತಿಹಾಸಿಕ ಭಾಷಾ ಸಂಶೋಧನೆಯನ್ನು ಪರಿಚಯ ಮಾಡಿಕೊಡಿ.

೫. ಕನ್ನಡ ಭಾಷೆಯ ಅವಸ್ಥಾಂತರಗಳನ್ನು ಕುರಿತು ಬರೆಯಿರಿ.

೬. ಆಡಳಿತದಲ್ಲಿ ಬಳಕೆಯಾಗುವ ಪಾರಿಭಾಷಿಕ ಪದಗಳ ಬಗ್ಗೆ ಬರೆಯಿರಿ.

**II. ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. ೩x೧೦=೩೦**

೧. ಸಾಮಾಜಿಕ ಭಾಷಾವಿಜ್ಞಾನ ಬೆಳೆದು ಬಂದ ಬಗೆಯನ್ನು ವಿವರಿಸಿ.

೨. "ಅನ್ಯಭಾಷಾ ಶಿಕ್ಷಣ–ಮಾತೃಭಾಷಾ ಶಿಕ್ಷಣದಷ್ಟು ಸುಲಭವಾದುದಲ್ಲ"– ಎಂಬುದನ್ನು ವಿಶ್ಲೇಷಿಸಿ.

೩. ಉಪಭಾಷೆ ಎಂದರೇನು? ಅವುಗಳು ಉಂಟಾಗಲು ಕಾರಣಗಳನ್ನು ತಿಳಿಸಿ.

೪. 'ಸಂವಹನ ಮಾಧ್ಯಮದಲ್ಲಿ ಕನ್ನಡ' ಕುರಿತು ಬರೆಯಿರಿ.

(ಪು.ತಿ.ನೋ)



**III ಯಾವುದಾದರೂ ಎರಡು ಪ್ರಶ್ನೆಗಳಿಗೆ ವಿವರವಾದ ಉತ್ತರ ಬರೆಯಿರಿ. ೨x೧೫=೩೦**

೧. ಭಾಷಾವಿಜ್ಞಾನದ ಐದು ಐತಿಹಾಸಿಕ ತಿರುವುಗಳನ್ನು ವಿಶ್ಲೇಷಿಸಿ.

೨. ಲಿಪಿಸಂಸ್ಕರಣ ಎಂದರೇನು? ಬಿಎಂಶ್ರೀ ಅವರು ಕೈಗೊಂಡ ಕ್ರಮಗಳಾವುವು?

೩. ವ್ಯಾಕರಣವೆಂದರೇನು? ಭಾಷಾವಿಜ್ಞಾನಿಗಳ ಅಭಿಪ್ರಾಯಗಳೊಂದಿಗೆ ಪರಿಚಯಿಸಿ.

೪. ಮಂಡ್ಯ ಕನ್ನಡದ ವೈಶಿಷ್ಟ್ಯವನ್ನು ಕುರಿತು ಬರೆಯಿರಿ.

**IV. ಯಾವುದಾದರೂ ಐದು ವಿಷಯಗಳ ಬಗ್ಗೆ ಟಿಪ್ಪಣಿ ಬರೆಯಿರಿ. ೫x೪=೨೦**

೧. ಸರ್ ವಿಲಿಯಂ ಜೋನ್ಸ್

೨. ವಾಕ್ಯ ವಿಜ್ಞಾನ

೩. ಶಿಕ್ಷಣದಲ್ಲಿ ಕನ್ನಡ

೪. ನ್ಯಾಯಾಲಯದಲ್ಲಿ ಕನ್ನಡ ಬಳಕೆ

೫. ಭಾಷಾವಾರು ಪ್ರಾಂತಗಳು

೬. ವಿವರಣಾತ್ಮಕ ಸಂಶೋಧನೆ

೭. ಕನ್ನಡ ಭಾಷೆಯ ಏಕೀಕರಣ

* * * *

# ಕನ್ನಡ ಸಾಹಿತ್ಯ ಪರಿಷತ್ತು

ಬೆಂಗಳೂರು – ೧೮

ಸ್ಥಾಪನೆ : ೧೯೧೫

## ಕನ್ನಡ ರತ್ನ ಪರೀಕ್ಷೆ – ೨೦೨೨

**ಪ್ರಶ್ನೆಪತ್ರಿಕೆ – ೫**

## ಜನಪದ ಸಾಹಿತ್ಯ – ಕನ್ನಡ ಸಂಸ್ಕೃತಿ

[ಮರುಪರೀಕ್ಷೆ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ]

**ಅವಧಿ : ೩ ಗಂಟೆಗಳು** **ಗರಿಷ್ಠ ಅಂಕಗಳು : ೧೦೦**

### 'ಎ' ಭಾಗ

**I. ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರಿಸಿ.** **೫x೧೦=೫೦**

೧. ವಿವಿಧ ವಿದ್ವಾಂಸರ ವ್ಯಾಖ್ಯೆಗಳೊಂದಿಗೆ ಜಾನಪದ ಎಂದರೇನು? ವಿವರಿಸಿ.

೨. ಕರ್ನಾಟಕದಲ್ಲಿ ನಡೆದ ಜಾನಪದ ಅಧ್ಯಯನದ ಬಗೆಗೆ ಬರೆಯಿರಿ.

೩. ಜಾನಪದ ಸಂಪಾದನೆ ಮತ್ತು ಜಾನಪದ ಸಂಶೋಧನೆಯ ಬಗೆಗೆ ಬರೆಯಿರಿ.

೪. ಚಿಕ್ಕ ಹೊನ್ನಿ, ದೊಡ್ಡ ಹೊನ್ನಿ ಕಥೆಯ ಸಾರಾಂಶ ಬರೆಯಿರಿ.

೫. ಒಗಟಿನ ಸ್ವರೂಪ ಮತ್ತು ಲಕ್ಷಣಗಳನ್ನು ಕುರಿತು ಬರೆಯಿರಿ.

೬. ಗಾದೆ ಎಂದರೇನು? ಪಠ್ಯದಲ್ಲಿರುವ ಗಾದೆಗಳಲ್ಲಿ ನಾಲ್ಕು ಗಾದೆಗಳನ್ನು ವಿಸ್ತರಿಸಿ ಬರೆಯಿರಿ.

೭. ನಿಗಲ್ ಬಲಿ ಮತ್ತು ಕೆರೆಗೆ ಹಾರ ಕಥನಗೀತೆಗಳಲ್ಲಿ ಕಂಡುಬರುವ ಸಾದೃಶ್ಯ ಮತ್ತು ವೈದೃಶ್ಯಗಳನ್ನು ಕುರಿತು ಚರ್ಚಿಸಿ.

೮. ಜನಪದ ಮಹಾಕಾವ್ಯಗಳ ಸ್ವರೂಪ ಮತ್ತು ಲಕ್ಷಣಗಳನ್ನು ಬರೆಯಿರಿ.

**II. ಈ ಕೆಳಗಿನವುಗಳಲ್ಲಿ ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ.** **೫x೪=೨೦**

೧. ಪ್ರಾಣಿಕಥೆಗಳು
೨. ಮುಸುರೆ ತಿಕ್ಕುವವಳು
೩. ಜಾನಪದ ಕ್ಷೇತ್ರ ಕಾರ್ಯ
೪. ಸ್ತ್ರೀವಾದಿ ದೃಷ್ಟಿಯ ಒಗಟುಗಳು
೫. ಜನಪದ ತ್ರಿಪದಿಗಳು
೬. ಉತ್ತರ ದೇವಿ
೭. ಮಂಟೇಸ್ವಾಮಿ

(ಪು.ತಿ.ನೋ)



### 'ಬಿ' ಭಾಗ

**III. ಐದನೆಯ ಪ್ರಶ್ನೆ ಬಿಡದಂತೆ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ.**
**೩x೧೦=೩೦**

೧. ಕರ್ನಾಟಕದ ಸಂಸ್ಕೃತಿ, ಪರಂಪರೆಯ ಬೆಳವಣಿಗೆಯಲ್ಲಿ ಕದಂಬರು ಮತ್ತು ಬಾದಾಮಿ ಚಾಲುಕ್ಯರ ಕೊಡುಗೆಗಳೇನು? ವಿವರಿಸಿ.

೨. ಕನ್ನಡ ಕವಿಗಳು ತಮ್ಮ ಕಾವ್ಯಗಳಲ್ಲಿ ಚಿತ್ರಿಸಿರುವ ನಾಡುನುಡಿಗಳ ಬಗೆಗೆ ಬರೆಯಿರಿ.

೩. ಕನ್ನಡ–ಕರ್ನಾಟಕ–ಭಾರತಗಳ ಹಿನ್ನೆಲೆಯಲ್ಲಿ ಡಾ. ಚಿದಾನಂದ ಮೂರ್ತಿಯವರ ನಿಲುವುಗಳನ್ನು ಕುರಿತು ಬರೆಯಿರಿ.

೪. ಧರ್ಮಸಮನ್ವಯತೆಯನ್ನು ಕಾಪಾಡಿದ ರಾಜ ಮನೆತನಗಳ ಬಗೆಗೆ ಬರೆಯಿರಿ.

**೫. ಕೆಳಗಿನವುಗಳಲ್ಲಿ ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ.**

೧. ಗೊಮ್ಮಟ ವಿಗ್ರಹ
೨. ಕರ್ನಾಟಕ ಸಂಗೀತ
೩. ವಚನಕಾರರು
೪. ಪಂಪ
೫. ಆಲೂರ ವೆಂಕಟರಾಯರ ಮಾತುಗಳು
೬. ಹುಲಿತನವನ್ನು ಮರೆತ ಹುಲಿಮರಿ
೭. ಏಳಿ ಎದ್ದೇಳಿ

* * *